ಪಿ.ಡಬ್ಲ್ಯೂ1 ಸಿ. ಸಿ.ನಂ.1244/2021

ದಿನಾಂಕಃ 21-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಟಿ ವಿ ಎಸ್ ವಕೀಲರಿಂದಃ

ನಾನು ದ್ವಿತೀಯ ಪಿ ಯು ಸಿ ವರೆಗೆ ಓದಿರುತ್ತೇನೆ. ಆರೋಪಿ ಹೊಸ ಸಂಬಂಧವಾಗಿದ್ದು ನಂತರ ಹಳೇ ಸಂಬಂದ ಅಂತ ಗೊತ್ತಾಗಿರುತ್ತದೆ. ನಾನು ದೂರನ್ನು ಬೆಂಗಳೂರಿನ ಜೆ ಪಿ ನಗರದಲ್ಲಿ ಇರುವ ಪುಟ್ಟೇನಹಳ್ಳಿಯ ಠಾಣೆಯಲ್ಲಿ ದಾಖಲು ಮಾಡಿದ್ದು ಚಿಂತಾಮಣಿ ಠಾಣೆಗೆ ವರ್ಗಾವಣೆ ಮಾಡಿರುತ್ತಾರೆ. ದಿಃ27-1-2021 ರಲ್ಲಿ ದೂರು ದಾಖಲು ಮಾಡಿರುತ್ತೇನೆ. ನನಗೆ ಮದುವೆಯಾದ 10 ವರ್ಷದ ನಂತರ ದೂರನ್ನು ದಾಖಲು ಮಾಡಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ದೂರು ದಾಖಲು ಮಾಡುವಾಗ ನನ್ನ ಜೊತೆ ನನ್ನ ತಾಯಿ ಅಕ್ಕ ನನ್ನ ಮಕ್ಕಳು ಇದ್ದರು. ನನ್ನ ಅನುಭವ ನನ್ನ ಕಷ್ಟದ ಮೇಲೆ ನಾನು ದೂರು ದಾಖಲು ಮಾಡಿರುತ್ತೇನೆ. ಚಿಂತಾಮಣಿ ಠಾಣೆಯಲ್ಲಿ ದೂರು ಕೊಡಲು ತೊಂದರೆ ಇತ್ತಾ ಎಂದರೆ ಇಲ್ಲ ನಾನು ವಾಸ ಮಾಡುತ್ತಿರುವ ಜಾಗದಲ್ಲಿ ದೂರು ದಾಖಲು ಮಾಡಬೇಕು ಅಂತ ಹೇಳಿದ್ದರಿಂದ ದೂರು ದಾಖಲು ಮಾಡಿರುತ್ತೇನೆ ಹಾಗೂ ಕರೋನಾ ಸಮಯ ಆಗಿತ್ತು.

ಮದುವೆಯಾದ 3-4 ವರ್ಷಗಳ ಕಾಲ ನನ್ನ ಗಂಡನ ಜೊತೆ ಚೆನ್ನಾಗಿ ಇರುತ್ತೇನೆ. ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ ತಕ್ಷಣ ದೂರು ಪಡೆದುಕೊಂಡಿರುತ್ತಾರೆ. ಅದೇ ದಿನವೇ ಪ್ರ. ವ. ವರದಿಯನ್ನು ತಯಾರು ಮಾಡಿರುತ್ತಾರೆ. ದೂರು ದಾಖಲಾದ ನಂತರ ನಿಮ್ಮ ಗಂಡನ ಮನೆಯ ಕಡೆಯವರನ್ನು ಕರೆದು ಪೋಲಿಸರು ವಿಚಾರ ಮಾಡಿರುತ್ತಾರ ಎಂದರೆ ಮಾಡಿರುವುದಿಲ್ಲ. ಹಿಂದೂ ಸಂಪ್ರದಾಯದಂತೆ ಯಾವ ರೀತಿ ಮದುವೆ ಮಾಡಿರುತ್ತಾರೆ ಎಂದರೆ ನನ್ನ ಗಂಡನ ಮನೆ ಕಡೆಯವರು ನೋಡಿ ಒಪ್ಪಿಕೊಂಡ ನಂತರ ಮದುವೆ ಮಾಡಿರುತ್ತಾರೆ. ನಾನು ಚಿಂತಾಮಣಿಯಲ್ಲಿ ವಾಸ ಮಾಡುತ್ತಿದ್ದಾಗ ಮಕ್ಕಳಾಗಿರುತ್ತದೆ.

ಮದುವೆ ಕಾಲಕ್ಕೆ 3 ಲಕ್ಷ ರೂಪಾಯಿ ಹಣವನ್ನು ಆರೋಪಿಗೆ ಕೊಟ್ಟಿದ್ದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ನಮ್ಮ ತಾಯಿ ಅಕ್ಕ ಮನೆಯಲ್ಲಿ ಕೊಟ್ಟಿರುತ್ತಾರೆ.

210 ಗ್ರಾಂ ಬಂಗಾರವನ್ನು ಎಲ್ಲಿ ಖರೀದಿ ಮಾಡಿರುತ್ತೀರಿ ಎಂದರೆ ಚಿಂತಾಮಣಿಯಲ್ಲಿ . 210 ಗ್ರಾಂ ಚಿನ್ನ ಖರೀದಿ ಮಾಡಿದ ಬಗ್ಗೆ ದಾಖಲೆಯನ್ನು ಪೋಲಿಸ್ ಠಾಣೆಗೆ ಕೊಟ್ಟಿರುವುದಿಲ್ಲ. ಮದುವೆಯಾದ ನಂತರ ನಾವು ನಮ್ಮ ಅತ್ತೆ ಮನೆಯಲ್ಲಿ ಇರುತ್ತೇವೆ. ಮದುವೆ ಖರ್ಚು ಎಲ್ಲಾ ಆರೋಪಿತರೇ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾವು ಮಾಡಿಕೊಡುತ್ತೇವೆ ಅಂತ ಹೇಳಿದ್ದು ಅವರು ಬೇಡ ಅಂತ ಅವರೇ ಮಾಡಿಕೊಂಡಿರುತ್ತಾರೆ. 3 ಲಕ್ಷ ರೂಗಳನ್ನು ಆರೋಪಿಗೆ ಪ್ರೀತಿಯಿಂದ ಕೊಟ್ಟಿರುತ್ತೀರಿ ಎಂದರೆ ಸರಿ. ಆದರೆ ಅವರು ವರದಕ್ಷಣೆಯಾಗಿ ಪಡೆದಿರುತ್ತಾರೆ. ವರದಕ್ಷಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ತಪ್ಪು ಎಂದರೆ ಸರಿ.

ನಿಮಗೆ ಯಾರು ತೊಂದರೆ ಕೊಡುತ್ತಿದ್ದರು ಎಂದರೆ ಅತ್ತೆ ಮಾವ, ನಾದಿನಿ ಮತ್ತು ಗಂಡ. ದೂರನ್ನು ದಾಖಲು ಮಾಡಿದ ನಂತರ ಪೋಲಿಸರು ನಿಮ್ಮನ್ನು ಠಾಣೆಗೆ ಕರೆಸಿರುತ್ತಾರಾ ಎಂದರೆ ಕರೆಸಿರುತ್ತಾರೆ. ದಿ:04-4-21 ರಂದು ನಿಮ್ಮ ಅತ್ತೆ ಮಾವ ನಾದಿನಿ ತೊಂದರೆ ಕೊಟ್ಟಿರುವುದಿಲ್ಲ ಅಂತ ಮರು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗೆ 3 ಲಕ್ಷ ರೂ ವರದಕ್ಷಣೆ ಕೊಟ್ಟಿರುವ ಬಗ್ಗೆ ಪೋಟೋ ಮತ್ತು ಸಿ ಡಿ ಯನ್ನು ಪ್ರತ್ಯೇಕವಾಗಿ ಇಟ್ಟುಕೊಂಡಿಲ್ಲ. ನೀವು ಆರೋಪಿಗೆ ಯಾವುದೇ ವರದಕ್ಷಣೆ ಹಣವನ್ನು ಕೊಟ್ಟಿರುವುದಿಲ್ಲ ಅದ್ದರಿಂದ ದಾಖಲೆ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. 2-3 ಬಾರಿ ನನ್ನ ಅತ್ತೆ ಮಾವ, ನಾದನಿ ರವರು ಹಣ ತರುವಂತೆ ನನಗೆ ತೊಂದರೆ ಕೊಟ್ಟಿದ್ದರು, ಅ ಸಂಧರ್ಭದಲ್ಲಿ ನೀವು ದೂರು ದಾಖಲು ಮಾಡಲು ತೊಂದರೆ ಇತ್ತಾ ಎಂದರೆ ನಾನು ದೊಡ್ಡ ಸೊಸೆಯಾದ ಕಾರಣ ಕೊಟ್ಟಿರುವುದಿಲ್ಲ. ಆ ರೀತಿ ನಿಮ್ಮನ್ನು ಯಾರೂ ತೊಂದರೆ ಕೊಡಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಗೌರವಕಾಕಗಿ ಕೊಟ್ಟಿರುವುದಿಲ್ಲ.

2014 ರಲ್ಲಿ ನನ್ನ ತಾಯಿಯಿಂದ ಹಣ ತಂದು ಕೊಟ್ಟಿರುತ್ತೇನೆ. ಚಿಂತಾಮಣಿಯಲ್ಲಿ 2-3 ವರ್ಷಗಳ ಕಾಲ ಇದ್ದು 2014 ರಲ್ಲಿ ಚಿಂತಾಮಣಿಯಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ಆರೋಪಿ ತೊಂದರೆ ಮಾಡಿದ ಬಗ್ಗೆ ನಿಮ್ಮ ತವರು ಮನೆಯವರಿಗೆ ತಿಳಿಸಿರುತ್ತೀರಾ ಎಂದರೆ ತಿಳಿಸಿದ್ದು ಬಂದು ಪಂಚಾಯ್ತಿ ಮಾಡಿ ಸಮಾದಾನ ಮಾಡಿ ಹೋಗಿರುತ್ತಾರೆ. 2019 ರಲ್ಲಿ ಗಲಾಟೆಯಾಗಿ ತವರು ಮನೆಗೆ ಹೋಗಿದ್ದು ಆಗ ಆರೋಪಿ ನಮ್ಮನ್ನು ನೋಡಲು ಬಂದಿರುವುದಿಲ್ಲ. ಮದುವೆ

ಮಾತುಕತೆ ಸಮಯದಲ್ಲಿ ನಿಮ್ಮ ಮತ್ತು ಆರೋಪಿ ಸಂಬಧಿಕರು ಇದ್ದರು ಎಂದರೆ ಸರಿ. ಅವರನ್ನು ಬಿಟ್ಟು ಬೇರೆ ಯಾರು ಇರುತ್ತಾರೆ ಎಂದರೆ ಯಾರೂ ಇರಲಿಲ್ಲ. ಆರೋಪಿ 2 ನೇ ಮದುವೆಯಾದ ವಿಷಯ ನಮ್ಮ ಸಂಬಂಧಿಕರ ಕಡೆಯಿಂದ ಗೊತ್ತಾಗಿರುತ್ತದೆ. ಚಿಂತಾಮಣಿಯ ಬೆಂಗಳೂರಿನ ರಸ್ತೆಯಲ್ಲಿ 2 ನೇ ಮದುವೆಯಾಗಿ ವಾಸ ಮಾಡುತ್ತಿರುವ ಬಗ್ಗೆ ಗೊತ್ತಾಯಿತು. ಅವರು ಮದುವೆಯಾಗಿರುವ ಬಗ್ಗೆ ಠಾಣೆಯಲ್ಲಿ ದೂರು ದಾಖಲು ಮಾಡಿದ್ದು ಮನೆಗೆ ಕರೆದುಕೊಂಡು ಹೋಗಿ ತೋರಿಸಿದ್ದೆ. ಮದುವೆಯಾಗಿರುವ ಬಗ್ಗೆ ಠಾಣೆಯಲ್ಲಿ ದೂರು ದಾಖಲು ಮಾಡಿದ ಬಗ್ಗೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಅವರ ಹೆಸರು ಮತ್ತು ಪೊಟೋ ಕೊಟ್ಟಿರುತ್ತೇನೆ ಹಾಗೂ ಅವರಿಗೆ ಮಗು ಆಗಿರುವುದಕ್ಕೆ ದಾಖಲೆ ಕೊಟ್ಟಿರುತ್ತೇನೆ. ನಾನು 2 ನೇ ಮದುವೆ ಬಗ್ಗೆ ಆರೋಪಿಯನ್ನು ಕೇಳಲು ಹೋದಾಗ ಆರೋಪಿಯ ತಂದೆ ತಾಯಿ ನೀನು ಬಂದ ಹಾಗೆ ಅವಳೂ ಬಂದಿರುತ್ತಾರೆ ಅಂತ ಹೇಳಿ ನನ್ನನ್ನು ಹೊಡೆದು ಆಚೆ ಹಾಕಿರುತ್ತಾರೆ.

ನ್ಯಾಯಾಲಯದ ಬೆಳಗಿನ ಅವದಿ ಮುಗಿದ ಕಾರಣ ಮುಂದಿನ ಪಾಟೀಸವಾಲನ್ನು ಮದ್ಯಾಹ್ನದ ಅವದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ದಿನಾಂಕಃ 21-12-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಟಿ ವಿ ಎಸ್ ವಕೀಲರಿಂದಃ

ಮದುವೆಯ ಸಮಯದಲ್ಲಿ ಪ್ರೀತಿಯಿಂದ ಹುಡಗಿಗೆ ಮತ್ತು ಹುಡುಗನಿಗೆ ಉಡುಗೊರೆ ಕೊಡುವುದು ಸಂಪ್ರದಾಯ ಎಂದರೆ ಅವರು ವರದಕ್ಷಣೆ ಅಂತ ಕೇಳಿರುತ್ತಾರೆ. 3 ಲಕ್ಷ ರೂ ವರದಕ್ಷಣೆ ಕೊಟ್ಟಿರುವುದು ಸುಳ್ಳು ಎಂದರೆ ಸರಿಯಲ್ಲ. 2019 ರಲ್ಲಿ ನೀವು ಬೆಂಗಳೂರಿಗೆ ಹೋಗಿದ್ದು ಅದಕ್ಕಿಂತ ಪೂರ್ವದಲ್ಲಿ ನಿಮ್ಮ ಅತ್ತೆ ಮನೆಗೆ ಬಂದು ನೋಡಿಕೊಂಡಿರುತ್ತೀರಾ ಎಂದರೆ ಇಲ್ಲ. ಅದಕ್ಕಿಂತ ಪೂರ್ವದಲ್ಲಿ ಬಂದು ಹೋಗಲು ತೊಂದರೆ ಇತ್ತಾ ಎಂದರೆ ಕರೋನಾ ಸಮಯವಾಗಿದ್ದರಿಂದ ಬರಲು ಆಗಿರುವುದಿಲ್ಲ. ದಿಃ04-4-21 ರಂದು ಆರೋಪಿ 2 ನೇ ಮದುವೆಯಾಗಿದ್ದು ಅದರ ಬಗ್ಗೆ ಗೊತ್ತಿಲ್ಲ ಅಂತ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ.

ಪಂಚನಾಮೆ ಮಾಡುವ ಪೂರ್ದಲ್ಲಿ ನೋಟೀಸು ಕೊಟ್ಟಿರುತ್ತಾರಾ ಎಂದರೆ ನೋಟೀಸು ಕೊಟ್ಟಿರುವುದಿಲ್ಲ ಹೇಳಿರುತ್ತಾರೆ. ನಾನು ದೂರು ಕೊಟ್ಟ ಒಂದು ತಿಂಗಳ ನಂತರ ಹೇಳಿರುತ್ತಾರೆ. ಪಂಚನಾಮೆಯಲ್ಲಿ ಏನೇನು ಬರೆದುಕೊಂಡಿರುತ್ತಾರೆ ಎಂಬ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಮೊಟ್ಟ ಮೊದಲ ಬಾರಿಗೆ ಪಂಚನಾಮೆ ಮಾಡುವಾಗ ಯಾವ ಪೋಲಿಸರು ಹೇಳಿರುತ್ತಾರೆ ಎಂದರೆ ಅವರ ಹೆಸರು ಗೊತ್ತಿರುವುದಿಲ್ಲ ಚಿಂತಾಮಣಿ ಪೋಲಿಸರು ಹೇಳಿರುತ್ತಾರೆ. ದಿಃ17-2-21 ರಂದು ಬೆಂಗಳೂರು ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಇಬ್ಬರು ಪೋಲಿಸರು ಬಂದಿರುತ್ತಾರೆ. ಸ್ಥಳ ಪಂಚನಾಮೆಗೆ ಜಾಗವನ್ನು ನಾನೇ ತೋರಿಸಿರುತ್ತೇನೆ. ಸ್ಥಳ ಪಂಚನಾಮೆ ಬರೆದವರು ಪೋಲಿಸರಿದ್ದು ಅವರ ಹೆಸರು ಯಲ್ಲಮ್ಮ. ಪಂಚನಾಮೆಯಲ್ಲಿ ನಾವು ಪೋಲಿಸರು ಇರುತ್ತಾರೆ ಅವರೆಲ್ಲ ನಿಮ್ಮ ಸಂಬಂಧಿಕರು ಎಂದರೆ ಸರಿ. ನಮ್ಮ ಮನೆ ಪಕ್ಕದಲ್ಲಿ ಎಡಭಾಗದಲ್ಲಿ ಒಂದು ಮನೆ ಬಲಭಾಗದಲ್ಲಿ ಒಂದು ಮನೆ ಇದ್ದು ಮಧ್ಯದಲ್ಲಿ ನಾವು ಇರುತ್ತೇವೆ. ಪೋಲಿಸರು ಪಂಚನಾಮೆ ಮಾಡುತ್ತಿದ್ದಾರೆ ಅಂತ ಅಕ್ಕ ಪಕ್ಕದವರನ್ನು ಕರೆಯಲು ತೊಂದರೆ ಇತ್ತಾ

ಎಂದರೆ ನಾವು ಯಾರನ್ನು ಕರೆದಿರುವುದಿಲ್ಲ. ನಾನು ನನ್ನ ಅಕ್ಕ ಮಮತ ಶ್ರೀನಿವಾಸ ಮತ್ತು ಪೋಲಿಸರು ಪಂಚನಾಮೆಗೆ ಸಹಿ ಹಾಕಿರುತ್ತೇವೆ. ಪಂಚನಾಮೆಗೆ ಸಹಿ ಮಾಡಿರುವವರು ನಿಮ್ಮ ಸಂಬಂಧಿಕರು ಎಂದರೇ ಸರಿ . ಶ್ರೀನಿವಾಸ್ ಸಂಬಂಧಿಕರಲ್ಲ ಮಮತ ಸಂಬಂಧಿಕರು. ಘಟನಾ ಸ್ಥಳದ ದಕ್ಷಿಣಕ್ಕೆ ನರಸಿಂಹಮೂರ್ತಿ ರವರ ಮನೆ ಇದೆ ಎಂದರೆ ಸರಿ. ಪೂರ್ವ ಪಶ್ಚಿಮಕ್ಕೆ ರಾಕೃಷ್ಣಶೆಟ್ಟಿ ರವರ ಮನೆ ಇದೆ ಎಂದರೆ ಸರಿ. ಪಂಚನಾಮೆ ಯಾದ ತಕ್ಷಣ ಪೋಲಿಸರು ಏನು ಬರೆದುಕೊಂಡಿರುತ್ತಾರೆ ಅಂತ ಓದಿ ಹೇಳಿರುತ್ತಾರೆ. ಪೋಲಿಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ತಾಯಿ ಇಬ್ಬರೂ ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ.

ದಿಃ02-4-21 ರಲ್ಲಿ ಯಾವುದೇ ರೀತಿಯಲ್ಲಿ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎರಡೂ ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿಃ22-4-21 ರಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಎಷ್ಟು ಜನ ಬಂದಿರುತ್ತಾರೆ ಎಂದರೆ ನಾನು, ನನ್ನ ತಾಯಿ ಮತ್ತು ನಾರಾಯಣಸ್ವಾಮಿ ಬಂದಿದ್ದರು. ಮದುವೆ ಲಗ್ನಪತ್ರಿಕೆ ಕೊಡಬೇಕು ಅಂತ ಮಾಹಿತಿ ಕೊಟ್ಟವರಾರು ಎಂದರೆ ಪೋಲಿಸರು ಅವರ ಹೆಸರು ಹೇಳಲಾಗುವುದಿಲ್ಲ. ದಿಃ17-2-21 ರಂದು ಸ್ಥಳ ಪಂಚನಾಮೆಯನ್ನು 12 ರಿಂದ 1 ಗಂಟೆ ಒಳಗಡೆ. ದಿಃ2-4-21 ರಂದು ಪಂಚನಾಮೆಯನ್ನು 5 ಗಂಟೆ ಒಳಗಡೆ ಮಾಡಿರುತ್ತಾರೆ. ದಿಃ22-4-21 ರಂದು ಠಾಣೆಯಲ್ಲಿ ತಂದು ಕೊಟ್ಟಿದ್ದು ಅಲ್ಲೆ ಬೆರಳಚ್ಚು ಪಡಿಸಿ ಪಂಚನಾಮೆ ಮಾಡಿರುತ್ತಾರೆ. ಸಂಜೆ 5 ಗಂಟೆಯಾಗಿರುತ್ತದೆ. ಮಾಲು ಅಮಾನತ್ ಪಂಚನಾಮೆಯನ್ನು ಯಾರು ಬೆರಳಚ್ಚುಪಡಿಸಿರುತ್ತಾರೆ ಅಂತ ಅವರ ಹೆಸರು ಹೇಳಲಾಗುವುದಿಲ್ಲ. ಪೋಲಿಸರು ನಿಮಗೆ ಬಾವಚಿತ್ರವನ್ನು ಹಾಗೂ ಲಗ್ನಪತ್ರಿಕೆಯನ್ನು ಹಾಜರುಪಡಿಸಲು ಹೇಳಿರುವುದಿಲ್ಲ ನೀವೇ ಖುದ್ದಾಗಿ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಚೌಡರೆಡ್ಡಿ ಎನ್ನುವವರು ಮಾಲು ಅವೂನತ್ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಮೂರು ಅಮಾನತ್ ಪಂಚನಾಮೆಗೆ ಸಹಿ ಮಾಡಿರುವವರು ನಿಮ್ಮ ಸಂಬಂಧಿಕರು ಎಂದರೆ ಸರಿಯಲ್ಲ ಬೇರೆಯವರು ಇರುತ್ತಾರೆ. ದಿಃ17-2-21 ಮತ್ತು ದಿಃ 2-4-21 ರಂದು ಎರಡು ಪಂಚನಾಮೆಗೆ ಮೇಲೆ ಹೇಳಿದ ಒಂದೇ ಚೆಕ್ಕುಬಂದಿ ಎಂದರೆ ಸರಿ. ದಿಃ22-4-21 ರಂದು ನೀವು ಠಾಣೆಗೆ ಹೋಗಿ ಯಾವುದೇ

ದಾಖಲೆ ಹಾಜರುಪಡಿಸಿರುವುದಿಲ್ಲ ಪಂಚನಾಮೆ ಕಾಲಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ದಿ:17-2-21 ರಂದು ಪೋಲಿಸರನ್ನು ನೀವೇ ಕರೆಸಿಕೊಂಡು ಪಂಚನಾಮೆ ಮಾಡಿಸಿಕೊಂಡಿದ್ದು ಪೊಲಿಸರು ಸ್ಥ.ಳಕ್ಕೆ ಬಂದಿಲ್ಲ ಎಂದರೆ ಸುಳ್ಳು. ದಿ:17-2-21 ರಂದು ಪೋಲಿಸರನ್ನು ಬಂದಿರುವುದಿಲ್ಲ ನೀವೆ ಕರೆಸಿಕೊಂಡು ಪಂಚನಾಮೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಎರಡೂ ಪಂಚನಾಮೆಗೆ ನಿಮಗೆ ಬೇಕಾದ ಸಾಕ್ಷಿಗಳನ್ನು ಕರೆದುಕೊಂಡು ಹೋಗಿ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ನಾರಾಯಣ ಬೈರೆಡ್ಡಿ ಎನ್ನುವವರು ನಿಮ್ಮ ಹತ್ತಿರದ ಸಂಬಂಧಿಗಳು ಎಂದರೆ ಸರಿ, ಸಾಕ್ಷಿ ಮುಂದುವರಿದು ದೂರದ ಸಂಬಂಧಿಗಳು ಎಂದು ನುಡಿಯುತ್ತಾರೆ. ನಿಮ್ಮ ಮದುವೆಯಾಗಿ 11 ವರ್ಷ ಆಗಿರುತ್ತದೆ ಎಂದರೆ ಸುಳ್ಳು 14 ವರ್ಷ ಆಗಿರುತ್ತದೆ. ಮದುವೆಯಾದ 2 ವರ್ಷದಲ್ಲಿ ನಿಮ್ಮ ಮಾವನಿಗೆ ಸಂಬಧಪಟ್ಟ ಜಮೀನು ಮಾಡಿಕೆರೆ ಹತ್ತಿರ ಇತ್ತು ಎಂದರೆ ಸರಿ. ಆ ಜಮೀನನ್ನು 30 ಲಕ್ಷಕ್ಕೆ ಮಾರಾಟ ಮಾಡಿದ್ದರು ಎಂದರೆ ಸರಿ. ಆಗ ನೀವು ಮತ್ತು ನಿಮ್ಮ ಗಂಡ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೀರಿ ಎಂದರೆ ಸುಳ್ಳು ಆ 30 ಲಕ್ಷ ಹಣವನ್ನು ನೀವೇ 15 ಲಕ್ಷ ಹಣವನ್ನು ಹಾಗೂ ಮಕ್ಕಳನ್ನು ಕರೆದುಕೊಂಡು ಹೋಗಿ ಅಂದಿನಿಂದ ಇಂದಿನವರೆಗೆ ನಿಮ್ಮ ತಾಯಿ ಮನೆಯಲ್ಲಿ ವಾಸ ವಾಗಿ ದೂರ ಇದ್ದು ಈಗ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೀರಿ ಎಂದರೆ ಸುಳ್ಳು ನಿಮ್ಮ ಅತ್ತೆಮನೆಯವರ ಮೇಲಾಗಲೀ ನಿಮ್ಮ ಗಂಡನ ಮೇಲಾಗಲೀ ಪ್ರೀತಿ ವಿಶ್ವಾಸ ಇಲ್ಲ ಎಂದರೆ ಸುಳ್ಳು ನೀವು ಮದುವೆಯಾದ ಕೇವಲ 2 ವರ್ಷಗಳ ಕಾಲ ಆರೋಪಿ ಜೊತೆ ಇದ್ದೀರಿ ಎಂದರೆ ಸುಳ್ಳು ನಿಮ್ಮ ಗಂಡನಾಗಲೀ ನಿಮ್ಮ ಅತ್ತೆ ಮನೆಯವರಾಗಲೀ ಯಾವುದೇ ವರದಕ್ಷಣೆ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ರೀತಿಯ ದೈಹಿಕ ಹಲ್ಲೆ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸುಳ್ಳು ಸರಸಮ್ಮ, ಲೀಲಾವತಿ, ಸುಪ್ರಿಯ ಮುನಿಯಪ್ಪ ಇವರು ಯಾವುದೇ ರೀತಿಯ ಹಲ್ಲೆ ಮಾಡಿಲ್ಲ ಆದ್ದರಿಂದ ಅವರ ವಿರುದ್ಧ ದೂರು ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಹಲ್ಲೆ ಮಾಡಿದ್ದರೆ ನೀವು ಚಿಕಿತ್ಸೆ ಪಡೆದು ದಾಖಲೆ ಹಾಜರುಪಡಿಸುತ್ತಿದ್ದೀರಿ ಎಂದರೆ ಸಂಜೆಯಾಗಿರುವುದರಿಂದ ಆಸ್ಪತ್ರೆಗೆ ಹೋಗಿರುವುದಿಲ್ಲ. ಆರೋಪಿಗೆ ಮದುವೆ ಕಾಲಕ್ಕೆ ವರದಕ್ಷಣೆಯಾಗಿ 3 ಲಕ್ಷ ಹಣ ಕೊಟ್ಟಿಲ್ಲ 40 ಗಾರಂ ಚಿನ್ನ ಕೊಟ್ಟಿಲ್ಲ ಎಂದರೆ

ಸರಿಯಲ್ಲ. ಆರೋಪಿತರು ಶ್ರೀಮಂತಿಕೆ ಸ್ಥಾನದಲ್ಲಿ ಇದ್ದು ನಿಮ್ಮನ್ನು ವರದಕ್ಷಣೆ ಕೇಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸುಳ್ಳು ನಿಮ್ಮನ್ನು ಆರೋಪಿತರು ವರದಕ್ಷಣೆ ಕೇಳಿರುವುದಿಲ್ಲ ಹೊರಹಾಕಿರುವುದಿಲ್ಲ ಹೈಷಾರಾಮಿ ಜೀವನ ಬೇಕು ಅಂತ ಬೆಂಗಳೂರಿಗೆ ಹೋಗಿ ವಾಸವಾಗಿದ್ದೀರಿ ಎಂದರೆ ಸರಿಯಲ್ಲ. ಸುಮಾರು ಬಾರಿ ನಿಮ್ಮ ಗಂಡ ನಿಮ್ಮನ್ನು ಮ್ಕಳನ್ನು ನೋಡಲು ಬಂದಿದ್ದರೂ ನೀವು ನೋಡಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ದ್ವೇಷ ತೀರಿಸಿಕೊಳ್ಳಲು ನಿಮ್ಮ ಸಂಬಂಧಿಕರ ಮಾತು ಕೇಳಿ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಿಂತಾಮಣಿಯಲ್ಲಿದ್ದಾಗ ಆರೋಪಿ ಯಾವತ್ತೂ ನಿಮ್ಮನ್ನು ಹಣ ತರುವಂತೆ ಪೀಡಿಸಿರುವುದಿಲ್ಲ ಎಂದರೆ ಸುಳ್ಳು ಎಲ್ಲಾ ಘಟನೆ ಬಗ್ಗೆ ಕಲ್ಪನೆ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀಯಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.